



**ಹಾಸನದ 'ಬಾಲಕರ ಸರ್ಕಾರಿ ಪ್ರೌಢಶಾಲೆ'ಗೆ ಒಂದೂವರೆ ಶತಮಾನದ ಇತಿಹಾಸವಿದೆ. ಶಾಲೆಯ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಈ ಶಾಲೆಗೀಗ ವಿದಾಯ ಹೇಳುವ ಸಮಯ. ನಾಡಿನ ಹೆಮ್ಮೆಯ ಶಾಲೆಯ ಕಟ್ಟಡವನ್ನು ಸ್ಮಾರಕವಾಗಿ ಉಳಿಸಿಕೊಳ್ಳುವ ಅದೃಷ್ಟವೂ ನಮ್ಮ ಪಾಲಿಗೆ ಇದ್ದಂತಿಲ್ಲ.**

ಸರ್ಕಾರಿ ಶಾಲೆಗೆ ಈಗ 157 ವರ್ಷಗಳ ತುಂಬು ಪ್ರಾಯ.

1864ರಲ್ಲಿ ಆರಂಭವಾದ ಶಾಲೆಯಲ್ಲಿ ಶಿಕ್ಷಕರು, ಉಳಿದ ಸಿಬ್ಬಂದಿ ಸೇರಿದಂತೆ ಒಟ್ಟು 80 ಸಿಬ್ಬಂದಿಯಿದ್ದರು. ಆರಂಭದಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ ಲಭ್ಯವಿರದಿದ್ದರೂ 8, 9, 10 — ಈ ಮೂರೂ ತರಗತಿಗಳಲ್ಲಿ 'ಎ' ಹಾಗೂ 'ಬಿ' ಉಪ ವಿಭಾಗಗಳಿದ್ದವು. ವಿಶಾಲವಾದ ಮೈದಾನವೂ ಸೇರಿದಂತೆ ಒಟ್ಟು 25 ಎಕರೆಯ ಜಾಗದಲ್ಲಿ ಶಾಲೆ ರೂಪುಗೊಂಡಿತ್ತು. ಆರಂಭದಿಂದಲೂ ಶಿಕ್ಷಕರೆಲ್ಲರೂ ಕರ್ನಾಟಕದವರೇ ಆಗಿದ್ದರು. ಕರ್ನಾಟಕದ ಹೆಸರಾಂತ ಮುಖ್ಯೋಪಾಧ್ಯಾಯರುಗಳಾದ ಜೆ.ಎಂ. ಟಿ. ರಾಜನ್, ಕೇಶವಮೂರ್ತಿ, ಕೃಷ್ಣಸ್ವಾಮಿ ಮೊದಲಾದವರು ಇಲ್ಲಿ ಸೇವೆ ಸಲ್ಲಿಸಿದ್ದಾರೆ.

ಶಾಲೆಯ ಘನತೆಗೆ ಕಲಶಪ್ರಾಯರಾಗಿ ಇರುವವರಲ್ಲಿ ಹೆಸರಿಸಲೇಬೇಕಾದವರ ಪಟ್ಟಿ ದೀರ್ಘವಾಗಿದೆ. ಪ್ರಸಿದ್ಧ ಕಾದಂಬರಿ 'ಕಾಂತಾಪುರ'ದ ಕರ್ತೃ ರಾಜಾರಾವ್, ಇಂದಿರಾಗಾಂಧಿಯವರ ಪತ್ರಿಕಾ ಕಾರ್ಯದರ್ಶಿಗಳಾಗಿದ್ದ ಹೆಚ್.ವೈ. ಶಾರದಾ ಪ್ರಸಾದ್, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಸಂಸದರಾಗಿದ್ದ ಸಿದ್ದನಂಜಪ್ಪ, ಗೋವಾ ವಿಶ್ವವಿದ್ಯಾಲಯದ ಪ್ರಥಮ ಉಪಕುಲಪತಿ ಡಾ. ಶೇಖ್ ಅಲಿ, ಮೈಸೂರು ಸಂಸ್ಥಾನದಲ್ಲಿ ಮಂತ್ರಿಗಳಾಗಿದ್ದು, ನಂತರದಲ್ಲಿ ಸ್ಪೀಕರ್ ಹಾಗೂ ಲೋಕಸೇವಾ ಆಯೋಗದ ಅಧ್ಯಕ್ಷರಾಗಿದ್ದ ಎಚ್.ಬಿ. ಗುಂಡಪ್ಪ ಗೌಡರು, ಖ್ಯಾತ ಜನಪದ ವಿದ್ವಾಂಸ ಎಸ್.ಕೆ. ಕರೀಂ ಖಾನ್, ಖ್ಯಾತ ಉದ್ಯಮಿ ಹಾಗೂ ರಾಜಕೀಯ ನೇತಾರರಾದ ಎಲ್.ಟಿ. ಕಾರ್ಲೆ, ಅವರ ನಿಕಟವರ್ತಿಗಳೂ ಉದ್ಯಮದಲ್ಲಿ ಭಾಗೀದಾರರೂ ಆಗಿದ್ದ ಜಿ.ಎಲ್. ನಲ್ಲೂರೇಗೌಡ, ಮಂತ್ರಿಗಳಾಗಿದ್ದ ರಾಚಯ್ಯನವರು, ರಾಜಕೀಯ ಧುರೀಣರಾದ ಎಚ್.ಬಿ. ಜ್ವಾಲನಯ್ಯ, ಚನ್ನವೀರಪ್ಪನವರು, ಶಾಸಕರಾದ ರುದ್ರಪ್ಪ, ಹನುಮೇಗೌಡರು, ಕರಿಗೌಡರು, 2019ರಲ್ಲಿ ನಿಧನರಾದ ಎಚ್.ಎಸ್. ಪ್ರಕಾಶ್, ಖ್ಯಾತ ಕ್ರಿಕೆಟಿಗ ಇ.ಎ.ಎಸ್. ಪ್ರಸನ್ನ, 'ಇಸ್ರೊ' ಅಧ್ಯಕ್ಷರಾಗಿದ್ದ ಕಿರಣ್ ಕುಮಾರ್... ಹೀಗೆ ಪಟ್ಟಿ ಮುಂದುವರೆಯುತ್ತದೆ.

ವಿದ್ಯಾರ್ಥಿಗಳಂತೆಯೇ ಶಿಕ್ಷಕರೂ ಪ್ರತಿಭಾವಂತರಿದ್ದರು. ಪ್ರಸಿದ್ಧ ವ್ಯಂಗ್ಯಚಿತ್ರಕಾರ ಆರ್.ಕೆ. ಲಕ್ಷ್ಮಣ್ ಹಾಗೂ ಪ್ರಸಿದ್ಧ ಕಾದಂಬರಿಕಾರ ಆರ್.ಕೆ. ನಾರಾಯಣ್ ಅವರ ತಂದೆ ಕೃಷ್ಣಸ್ವಾಮಿಗಳು 1915ರಿಂದ 1920ರವರೆಗೆ ಇಲ್ಲಿಯ ಮುಖ್ಯೋಪಾಧ್ಯಾಯರು. ಇವರ ಅವಧಿಯಲ್ಲಿಯೇ ಗೊರೂರರು ಇಲ್ಲಿ ವಿದ್ಯಾರ್ಥಿ. ಪ್ರಖ್ಯಾತ ನ್ಯಾಯಾಧೀಶರಾಗಿದ್ದ ವೆಂಕಟರಾಮಯ್ಯ ಅವರು ಇಲ್ಲಿ ಇತಿಹಾಸದ ಶಿಕ್ಷಕರು. 70ಕ್ಕೂ ಅಧಿಕ ಗುಣಾತ್ಮಕ ಕೃತಿಗಳನ್ನು ರಚಿಸಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಉಪಕುಲಪತಿಗಳೂ ಆಗಿದ್ದ ಡಾ. ಎಚ್.ಕೆ. ಲಕ್ಕಪ್ಪ ಗೌಡರು ಇಲ್ಲಿ ಶಿಕ್ಷಕರಾಗಿದ್ದರು. ಮೇರು ಸದೃಶ ಗುರು–ಶಿಷ್ಯರನ್ನು ಹೊಂದಿದ್ದ ಈ ಶಾಲೆ ಹಾಸನ ಮಾತ್ರವಲ್ಲ; ಕರ್ನಾಟಕದ ಹೆಮ್ಮೆಯ ಶಾಲೆ ಕೂಡ.

ಶಾಲೆಯ ಯಶೋಗಾಥೆ ಇಲ್ಲಿಗೇ ನಿಲ್ಲುವುದಿಲ್ಲ. 25 ಎಕರೆ ವಿಸ್ತೀರ್ಣದ ಈ ಶಾಲಾ ಆವರಣದಲ್ಲಿದ್ದ ಬೃಹತ್ ಮೈದಾನ ಆಗಿನ ರಾಜಕೀಯ ನಾಯಕರ ಸಭೆಗಳಿಗೆ ವೇದಿಕೆಯಾಗಿತ್ತು. ಇಂದಿರಾಗಾಂಧಿಯವರು ಇಲ್ಲಿ ಎರಡು ಬಾರಿ ಭಾಷಣ ಮಾಡಿದ್ದರು. 1972ರಲ್ಲಿ ಒಮ್ಮೆ ಸಂಜೆ 7 ಗಂಟೆಗೆ ಅವರು ಭಾಷಣ ಮಾಡುತ್ತಿದ್ದಾಗ ಅವರ ಪತ್ರಿಕಾ ಕಾರ್ಯದರ್ಶಿ ಶಾರದಾ ಪ್ರಸಾದ್ ಅವರು ತಾವು ಕಲಿತಿದ್ದ ಈ ಶಾಲೆಯಲ್ಲಿ, ತಾವು ಕುಳಿತುಕೊಳ್ಳುತ್ತಿದ್ದ ಕೊಠಡಿಯಲ್ಲಿ ಸ್ವಲ್ಪ ಹೊತ್ತು ಕುಳಿತುಹೋಗಿದ್ದರು. ಮಾಜಿ ಪ್ರಧಾನಿಗಳಾದ ಪಿ.ವಿ. ನರಸಿಂಹರಾವ್, ಅಟಲ್ ಬಿಹಾರಿ ವಾಜಪೇಯಿ, ದೇವೇಗೌಡರು ಮಾತ್ರವಲ್ಲದೆ, ಎಲ್.ಕೆ. ಅದ್ವಾನಿ ಅವರೂ ಇಲ್ಲಿ ಭಾಷಣ ಮಾಡಿದ್ದಾರೆ.

ಆ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಅನೇಕರು ತಮ್ಮ ಮನೆಗಳಲ್ಲಿ ಊಟದ ಏರ್ಪಾಡು ಮಾಡುವುದು ವಾಡಿಕೆಯಾಗಿತ್ತು. ಕೆಲ ಮಹಾತ್ಮರು ಈ ಶಾಲೆಯಲ್ಲಿ ಹೆಚ್ಚು ಮಕ್ಕಳು ಓದಲು ಅನುಕೂಲವಾಗಬೇಕು ಎಂದು ತಮ್ಮ ಜನಾಂಗದ ಮಕ್ಕಳಿಗೆ ವಸತಿ ನಿಲಯಗಳನ್ನು ಕಟ್ಟಿಸಿದ್ದರು. ಮುಸ್ಲಿಂ ಗಂಡು ಮಕ್ಕಳಿಗಾಗಿ ಹಾಸನ ಸಮೀಪದ ಅರೆಹಳ್ಳಿಯ ಶಕೂರ್ ಸಾಬರು ಈ ಶಾಲೆಯ ಎದುರಿಗೆ ರಸ್ತೆಯ ಇನ್ನೊಂದು ಭಾಗದಲ್ಲಿದ್ದ ತಮ್ಮ ಬಂಗಲೆಯನ್ನೇ ವಸತಿ ನಿಲಯವನ್ನಾಗಿ ಮಾಡಿ ಬಿಟ್ಟುಕೊಟ್ಟಿದ್ದರು. ಮಲ್ಲೇಗೌಡರು 'ವೀರಶೈವ ಮಕ್ಕಳ ವಿದ್ಯಾರ್ಥಿ ನಿಲಯ'ವನ್ನು ಕಟ್ಟಿಸಿದ್ದರೆ, ಹೆಚ್.ಬಿ. ಗುಂಡಪ್ಪ ಗೌಡರು ಒಕ್ಕಲಿಗ ಮಕ್ಕಳಿಗೆ, ಮೈಸೂರು ಅರಸರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಪರಿಶಿಷ್ಟ ಜನಾಂಗದ ಮಕ್ಕಳಿಗೆ